# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 1228
**ಸದಸ್ಯರ ಹೆಸರು** : ಶ್ರೀ ಮಧು ಜಿ. ಮಾದೇಗೌಡ (ಪದವೀದರರ ಕ್ಷೇತ್ರ)
**ಉತ್ತರಿಸುವ ಸಚಿವರು** : ಮಾನ್ಯ ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು.
**ಉತ್ತರಿಸಬೇಕಾದ ದಿನಾಂಕ** : 18.03.2025

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಮಂಡ್ಯ, ಮೈಸೂರು, ಹಾಸನ, ಮತ್ತು ಚಾಮರಾಜನಗರ ಜಿಲ್ಲಾ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹಾಪ್‌ಕಾಮ್ಸ್ ಮಳಿಗೆಗಳ ಸಂಖ್ಯೆ ಎಷ್ಟು; ಈ ಪೈಕಿ ಕಳೆದ 5 ವರ್ಷಗಳಲ್ಲಿ ಮುಚ್ಚಲ್ಪಟ್ಟ ಮಳಿಗೆಗಳ ಸಂಖ್ಯೆ ಎಷ್ಟು; ಇದಕ್ಕೆ ಕಾರಣಗಳೇನು; (ಜಿಲ್ಲಾವಾರು ಮಾಹಿತಿ ನೀಡುವುದು)</td><td>ಮಂಡ್ಯ, ಮೈಸೂರು, ಹಾಸನ, ಮತ್ತು ಚಾಮರಾಜನಗರ ಜಿಲ್ಲಾ ವ್ಯಾಪ್ತಿಯಲ್ಲಿ ಒಟ್ಟು 99 ಮಳಿಗೆಗಳು ಇರುತ್ತವೆ. ಈ ಪೈಕಿ ಕಳೆದ 05 ವರ್ಷಗಳಲ್ಲಿ 29 ಮಳಿಗೆಗಳು ಮುಚ್ಚಲ್ಪಟ್ಟಿವೆ. ಜಿಲ್ಲಾವಾರು ಮಾಹಿತಿ ಕೆಳಕಂಡಂತಿದೆ:-
<table>
<tr><th>ಜಿಲ್ಲಾ ಹಾಪ್ ಕಾಮ್ಸ್</th><th>ಒಟ್ಟು ಮಳಿಗೆಗಳು</th><th>ಕಾರ್ಯ ನಿರ್ವಹಿಸುತ್ತಿರುವ ಮಳಿಗೆಗಳ ಸಂಖ್ಯೆ</th><th>ಕಳೆದ 05 ವರ್ಷದಲ್ಲಿ ಮುಚ್ಚಲ್ಪಟ್ಟ ಮಳಿಗೆಗಳ ಸಂಖ್ಯೆ</th><th>ಕಾರಣಗಳು</th></tr>
<tr><td>ಮಂಡ್ಯ</td><td>29</td><td>19</td><td>10</td><td>ರಸ್ತೆ ಅಗಲೀಕರಣದಿಂದ ತೆರವುಗೊಳಿಸಲಾಗಿದೆ.</td></tr>
<tr><td>ಮೈಸೂರು</td><td>49</td><td>33</td><td>16</td><td>ಕಡಿಮೆ ವ್ಯಾಪಾರ ನಡೆಯುತ್ತಿದ್ದು, ಮಳಿಗೆ ಉಸ್ತುವಾರಿ ವೆಚ್ಚಗಳನ್ನು ಸರಿದೂಗಿಸಲು ಸಾಧ್ಯವಾಗದ ಕಾರಣ ಮುಚ್ಚಲ್ಪಟ್ಟಿದೆ.</td></tr>
<tr><td>ಹಾಸನ</td><td>11</td><td>08</td><td>03</td><td>ರಸ್ತೆ ಅಗಲೀಕರಣದಿಂದ ತೆರವುಗೊಳಿಸಲಾಗಿದೆ.</td></tr>
<tr><td>ಚಾಮರಾಜನಗರ</td><td>10</td><td>10</td><td>0</td><td>-</td></tr>
<tr><td>ಒಟ್ಟು</td><td>99</td><td>70</td><td>29</td><td></td></tr>
</table></td></tr>
<tr><td>ಆ)</td><td>ಇವುಗಳಲ್ಲಿ ಲಾಭ ಅಥವಾ ನಷ್ಟದಲ್ಲಿರುವ ಹಾಪ್‌ಕಾಮ್ಸ್‌ಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)</td><td>ಮಂಡ್ಯ, ಮೈಸೂರು, ಹಾಸನ, ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಲಾಭದಲ್ಲಿರುವ ಹಾಪ್‌ಕಾಮ್ಸ್ ಮಳಿಗೆಗಳು-53 ಮತ್ತು ನಷ್ಟದಲ್ಲಿರುವ ಹಾಪ್‌ಕಾಮ್ಸ್ ಮಳಿಗೆಗಳು -17. ವಿವರ ಕೆಳಕಂಡಂತಿದೆ:-
<table>
<tr><th>ಜಿಲ್ಲಾ ಹಾಪ್ ಕಾಮ್ಸ್</th><th>ಕಾರ್ಯನಿರ್ವಹಿಸುತ್ತಿರುವ ಮಳಿಗೆಗಳ ಸಂಖ್ಯೆ</th><th>ಲಾಭದಲ್ಲಿರುವ ಮಳಿಗೆಗಳ ಸಂಖ್ಯೆ</th><th>ನಷ್ಟದಲ್ಲಿರುವ ಮಳಿಗೆಗಳ ಸಂಖ್ಯೆ</th></tr>
<tr><td>ಮಂಡ್ಯ</td><td>19</td><td>13</td><td>06</td></tr>
<tr><td>ಮೈಸೂರು</td><td>33</td><td>29</td><td>04</td></tr>
<tr><td>ಹಾಸನ</td><td>08</td><td>06</td><td>02</td></tr>
<tr><td>ಚಾಮರಾಜನಗರ</td><td>10</td><td>05</td><td>05</td></tr>
<tr><td>ಒಟ್ಟು</td><td>70</td><td>53</td><td>17</td></tr>
</table></td></tr>
</table>

ಇ) ಸದರಿ ಜಿಲ್ಲೆಗಳಲ್ಲಿನ ಹಾಪ್‌ಕಾಮ್ಸ್ ಗಳಿಗೆ ಮಂಜೂರಾದ ಹುದ್ದೆಗಳು ಎಷ್ಟು? ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹಾಗೂ ಖಾಲಿಯಿರುವ ಹುದ್ದೆಗಳ ಸಂಖ್ಯೆ ಎಷ್ಟು: ಹಾಗೂ, ದಿನಗೂಲಿ ಆಧಾರದಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು: (ಮಾಹಿತಿ ಒದಗಿಸುವುದು)

ಈ ಹಾಪ್‌ಕಾಮ್ಸ್‌ಗಳಿಗೆ ಮಂಜೂರಾದ ಹುದ್ದೆಗಳು, ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹಾಗೂ ಖಾಲಿಯಿರುವ ಹುದ್ದೆಗಳ ಸಂಖ್ಯೆ ಹಾಗೂ ದಿನಗೂಲಿ ಆಧಾರದಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಈ ಕೆಳಕಂಡಂತಿದೆ:-

| ಜಿಲ್ಲಾ ಹಾಪ್ ಕಾಮ್ಸ್ | ಮಂಜೂರಾದ ಹುದ್ದೆಗಳ ಸಂಖ್ಯೆ | ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿ -ರುವವರ ಸಂಖ್ಯೆ | ಖಾಲಿ ಹುದ್ದೆಗಳ ಸಂಖ್ಯೆ | ದಿನ ಗೂಲಿ ನೌಕರರ ಸಂಖ್ಯೆ |
|---|---|---|---|---|
| ಮಂಡ್ಯ | 4 | 04 | 0 | 18 |
| ಮೈಸೂರು | 97 | 53 | 44 | - |
| ಹಾಸನ | 15 | 05 | 10 | 03 |
| ಚಾಮರಾಜನಗರ (ಫ್ರಾಂಚೈಸಿ ಆಧಾರದ ಮೇಲೆ ನಡೆಸಲಾಗುತ್ತಿದೆ.) | 0 | 0 | 0 | 0 |
| ಒಟ್ಟು | 116 | 62 | 54 | 21 |

(ಈ) ಜಿಲ್ಲಾ ಹಾಪ್‌ಕಾಮ್ಸ್‌ಗಳ ನಿವೃತ್ತ ಸಿಬ್ಬಂದಿಗಳಿಗೆ ಪಾವತಿಸಲು ಬಾಕಿಯಿರುವ ಗ್ರಾಚ್ಯುಟಿ (ಉಪದಾನ) ಮೊತ್ತ ಎಷ್ಟು? ಹಾಗೂ, ಗ್ರಾಚ್ಯುಟಿ ಮೊತ್ತಕ್ಕೆ ಅರ್ಹರಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು: ಈ ಮೊತ್ತವನ್ನು ಪಾವತಿಸದಿರಲು ಕಾರಣವೇನು: ಯಾವ ಕಾಲಮಿತಿಯೊಳಗೆ ಪಾವತಿಸಲಾಗುವುದು: (ಮಾಹಿತಿ ಒದಗಿಸುವುದು)

ಜಿಲ್ಲಾ ಹಾಪ್ ಕಾಮ್ಸ್ ಮಂಡ್ಯ, ಮೈಸೂರು, ಹಾಸನ ಮತ್ತು ಚಾಮರಾಜನಗರದಲ್ಲಿ ನಿವೃತ್ತ ಸಿಬ್ಬಂದಿಗಳಿಗೆ ಗ್ರಾಚ್ಯುಟಿ (ಉಪದಾನ) ಪಾವತಿ ಮಾಡುವ ವಿವರ ಕೆಳಕಂಡಂತಿದೆ:-

| ಜಿಲ್ಲಾ ಹಾಪ್ ಕಾಮ್ಸ್ | ಪಾವತಿಸಲು ಬಾಕಿ ಇರುವ ಗ್ರಾಚ್ಯುಟಿ ಮೊತ್ತ (ರೂ. ಲಕ್ಷಗಳಲ್ಲಿ) | ಗ್ರಾಚ್ಯುಟಿ ಮೊತ್ತಕ್ಕೆ ಅರ್ಹರಿರುವ ಸಿಬ್ಬಂದಿಗಳ ಸಂಖ್ಯೆ | ಪಾವತಿಸದಿರಲು ಕಾರಣ | ಕಾಲಮಿತಿ |
|---|---|---|---|---|
| ಮಂಡ್ಯ | 2.72 | 02 | ಅನುದಾನದ ಕೊರತೆ ಹಾಗೂ ವಿಚಾರಣೆ ನಡೆಯುತ್ತಿರುವುದರಿಂದ | ಹಂತ-ಹಂತವಾಗಿ ಪಾವತಿಸಲಾಗುತ್ತಿದೆ. |
| ಮೈಸೂರು | 15.11 | 02 | ನೌಕರರು ದಾವೆ ಹೂಡಿದ್ದು ಹಾಗೂ ಆಂತರಿಕ ವಿಚಾರಣೆ ನಡೆಯುತ್ತಿರುವುದರಿಂದ | ವಿಚಾರಣೆ ಇತ್ಯಾರ್ಥವಾದ ನಂತರ ಪಾವತಿಸಲಾಗುತ್ತದೆ. |
| ಹಾಸನ | 40.00 | 08 | ಅನುದಾನದ ಕೊರತೆ | ಜಿಲ್ಲಾ ಹಾಪ್ ಕಾಮ್ಸ್ ನಿಂದ ಕಾಲಮಿತಿ ನಿಗಧಿಪಡಿಸಿರುವುದಿಲ್ಲ. |
| ಚಾಮರಾಜನಗರ | - | - | - | - |
| ಒಟ್ಟು | 57.83 | 12 | | |

| | | |
|---|---|---|
| ೨) | ಹೊಸದಾಗಿ ಹಾಪ್‌ಕಾಮ್ಸ್ ಆರಂಭಿಸಲು ಇರುವ ಪ್ರಕ್ರಿಯೆಗಳೇನು: ಹಾಗೂ, ಪುನಃಶ್ಚೇತನಕ್ಕೆ ಕೈಗೊಂಡಿರುವ ಕ್ರಮಗಳೇನು? (ಜಿಲ್ಲಾವಾರು ಮಾಹಿತಿ ಒದಗಿಸುವುದು) | ಸೂಕ್ತ ಸ್ಥಳ, ಮಳಿಗೆಯ ಆರ್ಥಿಕ ಲಾಭದಾಯಕತೆ ಹಾಗೂ ಅನುದಾನದ ಲಭ್ಯತೆಯ ಆಧಾರದ ಮೇಲೆ ಹೊಸದಾಗಿ ಹಾಪ್ ಕಾಮ್ಸ್ ಮಾರಾಟ ಮಳಿಗೆಗಳನ್ನು ಆರಂಭಿಸಲಾಗುತ್ತಿದೆ.<br><br>ರಾಜ್ಯದಲ್ಲಿ 24 ಜಿಲ್ಲಾ ಹಾಪ್‌ಕಾಮ್ಸ್‌ಗಳು ಕಾರ್ಯ ನಿರ್ವಹಿಸುತ್ತಿದ್ದು, ಇವುಗಳ ಆರ್ಥಿಕ ಪುನಃಶ್ಚೇತನಕ್ಕಾಗಿ ಕೈಗೊಂಡಿರುವ ಕ್ರಮಗಳು ಈ ಕೆಳಕಂಡಂತಿವೆ:-<br><br>1. ಬೆಂಗಳೂರಿನ ಹಾಪ್ ಕಾಮ್ಸ್‌ನ ಪುನಶ್ಚೇತನ ಮತ್ತು ಮಾರುಕಟ್ಟೆ ವಿಸ್ತರಣೆಗಾಗಿ 2024-25ನೇ ಸಾಲಿಗೆ ರೂ.15.00 ಕೋಟಿಗಳ ದುಡಿಯುವ ಬಂಡವಾಳದ ಮಂಜೂರಾತಿಗಾಗಿ ಸಹಮತಿ ನೀಡಲಾಗಿದೆ.<br><br>2. ಸರ್ಕಾರಿ ಇಲಾಖೆಗಳು ಮತ್ತು ಅಂಗಸಂಸ್ಥೆಗಳಿಗೆ ಹಣ್ಣು ಮತ್ತು ತರಕಾರಿಗಳನ್ನು ಜಿಲ್ಲಾ ಹಾಪ್ ಕಾಮ್ಸ್‌ಗಳ ವತಿಯಿಂದ ಪೂರೈಸಲು ಅನುವಾಗುವಂತೆ ಕೆ.ಟಿ.ಪಿ.ಪಿ. ಕಾಯ್ದೆ 1999 ರ ಕಲಂ 4ಜಿ ಅಡಿಯಲ್ಲಿ ವಿನಾಯತಿಯನ್ನು ನೀಡಲಾಗಿದ್ದು, ಹಾಪ್ ಕಾಮ್ಸ್‌ಗಳ ಆರ್ಥಿಕ ಪುನಃಶ್ಚೇತನಕ್ಕೆ ಸಹಕಾರಿಯಾಗಲಿದೆ.<br><br>3. ರಾಜ್ಯದಲ್ಲಿನ ಎಲ್ಲಾ ಜಿಲ್ಲೆಗಳಲ್ಲಿ ನಿರ್ಮಿಸಲಾಗಿರುವ ಹಾಪ್‌ಕಾಮ್ಸ್ ಮಳಿಗೆಗಳ ನವೀಕರಣಕ್ಕೆ ಪ್ರತಿ ವರ್ಷ ಆರ್ಥಿಕ ಸಹಾಯ ನೀಡಲಾಗುತ್ತಿದೆ.<br><br>4. ಮಳಿಗೆಗಳನ್ನು ಫ್ರಾಂಚೈಸಿ ಆಧಾರದಲ್ಲಿ ತೆರೆದು ಲಾಭದಲ್ಲಿ ನಡೆಸಲು ಕ್ರಮ ವಹಿಸಲಾಗುತ್ತಿದೆ.<br><br>5. ಬೆಂಗಳೂರು ಅಪಾರ್ಟ್ಮೆಂಟ್ ಅಸೋಸಿಯೇಷನ್ ರವರ ಸಹಯೋಗದೊಂದಿಗೆ ಅಪಾರ್ಟ್ಮೆಂಟ್‌ಗಳ ನಿವಾಸಿಗಳಿಗೆ ಸಂಚಾರಿ ಮಳಿಗೆಗಳ ಮುಖೇನ ಹಣ್ಣು ತರಕಾರಿಗಳನ್ನು ಸರಬರಾಜು ಮಾಡಲು ಕ್ರಮವಹಿಸಲಾಗುತ್ತಿದೆ. |

**ಸಂಖ್ಯೆ: HORTI 122 HGM 2025**

**(ಎಸ್. ಎಸ್. ಮಲ್ಲಿಕಾರ್ಜುನ್)**
**ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು**